ಕೋರ್ಟಿನ ನಿರ್ಣಯಗಳೆಲ್ಲಾ ಆಗಿ ಹೋದ ಮೇಲೆ, ಸಾರ್ವಜನಿಕ ಹಿತಾಸಕ್ತಿಗೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದನ್ನು ಪ್ರಶ್ನಿಸುವುದಕ್ಕೆ ಸಾಧ್ಯವಿಲ್ಲ. ಆದರೆ ಪರಿಹಾರದ ವಿಚಾರದಲ್ಲಿ ಕೊಡತಕ್ಕಂಥ ಮೊತ್ತದ ಬಗ್ಗೆ ಅವರು ಹೋರಾಟ ಮಾಡಬಹುದು ಅನ್ನತಕ್ಕಂಥ ಕಾರಣ, ಬಹಳ ಪ್ರಕರಣಗಳಲ್ಲಿ ಕೂಡ ಆ ರೀತಿ ಆಗಿರತಕ್ಕಂಥದ್ದು ಕೂಡ ಇರುತ್ತದೆ. ಆದರೆ ಈ ಒಂದು ಹಿನ್ನೆಲೆಯಲ್ಲಿ ತಿದ್ದುಪಡಿಯನ್ನು ತಂದಿದ್ದೇನೆ. ತಾವೆಲ್ಲರೂ ಬಹಳ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದೀರಿ. ನಮ್ಮ ಕೃಷಿ ಸಚಿವರು ಮತ್ತು ನಮ್ಮ ಸದಸ್ಯರುಗಳೂ ಕೂಡ ಇದಕ್ಕೆ ಸಹಮತಿ ಕೊಟ್ಟಿರುವುದರಿಂದ ತಾವು ನಾಳೆಯವರೆಗೆ ಈ ಪರ್ಯಾಲೋಚನೆಯನ್ನು ತಡೆಹಿಡಿಯಿರಿ. ನಾಳೆ ಈ ವಿಚಾರದಲ್ಲಿ ಚರ್ಚೆ ಮಾಡಿ, ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ನಂತರ ನಾವು ಮುಂದುವರೆಯಬಹುದು.

(ಪರ್ಯಾಲೋಚನಾ ಪ್ರಸ್ತಾವವನ್ನು ತಡೆಹಿಡಿಯಲಾಯಿತು)

9. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ, ವಿಧಾನಸಭೆ: ಮಾನ್ಯ ಅಧ್ಯಕ್ಷರೇ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2005ನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು

ಅನುಬಂಧ – VI

ಅಧ್ಯಕ್ಷರು: ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆ ಹಾಗೂ ಅಂಗೀಕರಿಸಲು ಕೈಗೆತ್ತಿಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಮೂರು ಬಿಲ್ ಪಾಸ್ ಆಯಿತು. ಇದನ್ನು ಬೇಕಾದರೆ ನಾಳೆಗೆ ತೆಗೆದುಕೊಳ್ಳಬಹುದು.

ಶ್ರೀ ಡಿ. ಮಂಜುನಾಥ್: ಮಾನ್ಯ ಯಡಿಯೂರಪ್ಪನವರೇ, ಇದೊಂದು simple amendment ಅಷ್ಟೇ.

ಅಧ್ಯಕ್ಷರು: ಈ ತಿದ್ದುಪಡಿ ವಿಧೇಯಕದ ಅಂಗೀಕಾರದಿಂದ ordinance replace ಆಗುತ್ತದೆ.

10. ಶಾಸನೆ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾವ

***ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):** ಮಾನ್ಯ ಅಧ್ಯಕ್ಷರೇ, 2005ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

* ಈ ಭಾಷಣವು ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ